ಸಿದ್ದಪ್ಪನ ಮಗ ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಐದೆಕರೆ ಜಮೀನು ಖರೀದಿಸಿದ್ದ. ತಂದೆಯ ಅರ್ಧ ಎಕರೆ ಜಮೀನನ್ನು ಸಂಪೂರ್ಣವಾಗಿ ಅವರಿಗೆ ಬಿಟ್ಟು ತನ್ನ ಜಮೀನಿನಲ್ಲಿ ಗುಲಾಬಿ ಬೆಳೆಯತೊಡಗಿದ್ದ. ಅವನಷ್ಟು ಅಲ್ಲದಿದ್ದರೂ ಬಿ.ಎ. ಓದಿದ ಅವನ ಮಡದಿ ಅವನ ಸಹಾಯಕ್ಕೆ ನಿಂತಳು. ಇಬ್ಬರ ಪರಿಶ್ರಮದಿಂದ ತಕ್ಕಮಟ್ಟಿಗೆ ಯಶಸ್ಸು ಕಂಡರು. ಇದೂ ಸಿದ್ದಪ್ಪನ ಅಸೂಯೆಗೆ ಬಲ ನೀಡಿತು. ಇಷ್ಟು ವರ್ಷ ಉತ್ತಿ ಬಿತ್ತಿದವನ ಸಲಹೆಯನ್ನು ಬಯಸದೆ ಏನೂ ತಿಳಿಯದ ಮಡದಿಯನ್ನು ಅವಲಂಬಿಸಿದ ಮಗನ ಮೇಲೆ ರೋಸಿ ಹೋದ. ಸಿದ್ದಪ್ಪನ ಸಲಹೆಯನ್ನೂ ಕೋರುತ್ತಿದ್ದ ಮಗ ಅದರೆ ಮಡದಿಯ ಜೋತೆಯೂ ಚರ್ಚಿಸುತ್ತಿದ್ದ . ತನ್ನನ್ನು ಮಾತ್ರ ಅವಲಂಬಿಸಿ ಬೇಕು ಎನ್ನುತ್ತಿತ್ತು ಸಿದ್ದಪ್ಪನ ಮನಸು.

ಸಿದ್ದಪ್ಪನ ಅಸೂಯೆ ಅವನನ್ನು ಸಾರಾಯಿ ಅಂಗಡಿಗೆ ಕರೆದ್ಯೊಯಿತು. ಆವಾಗೊಮ್ಮೆ ಇವಾಗೊಮ್ಮೆ ಇಸ್ಪೀಟು ಆಡಲು ಕಲಿತ. ಮಗ ಸೊಸೆಯನ್ನು ನಕ್ಕು ಎರಡು ಮಾತನಾಡಿಸಿದರೆ ಸಾಕು ಮುನಿಸಿಕೊಂಡು ಸಾರಾಯಿ ಕುಡಿದು ಅಲ್ಲೆ ಎಲ್ಲೋ ಮಲಗಲು ಶುರು ಮಾಡಿದ. ಅವನನ್ನು ಹುಡುಕಿ ತಂದು ಅವನ ಹಾಸಿಗೆ ಮೇಲೆ ಮಲಗಿಸುತ್ತಿದ್ದ ಅವನ ಮಗ. ಅವನ ವರ್ತನೆಯಿಂದ ಅವನ ಮಗನಿಗೆ ದುಃಖವಾಗುತ್ತಿದೆ ಎನ್ನುವ ಪರಿಜ್ಞಾನವೇ ಇಲ್ಲ ಸಿದ್ದಪ್ಪನಿಗೆ. ಹೊಟ್ಟೆಕಿಚ್ಚಿನಿಂದ ಯಾವಗಲೂ ಏನೋ ಒಂದು ಕಿತಾಪತಿ ಮಾಡುತ್ತಿದ್ದ. ಆದರೂ ಅವರಿಬ್ಬರು ತಾಳ್ಮೆಯಿಂದ ಇರುತ್ತಿದ್ದರು. ಹೀಗೇ ಹೊಟ್ಟೆಕಿಚ್ಚಿನಲ್ಲಿ ಬೆಂದು ಅವರನ್ನು ನೋಯಿಸುತ್ತ ದಿನ ಕಳೆದ. ಸೊಸೆ ಗರ್ಭಿಣಿ ತಾನು ತಾತನಾಗುವನು ಎಂದು ತಿಳಿದು ಸಂತೋಷ ಪಡುವ ಬದಲು ಜೂಜಿನಲ್ಲಿ ಪಣಕ್ಕೆ ಜಮೀನಿಟ್ಟು ಕಳೆದುಕೊಂಡು ಹೇಳದೆ ಕೇಳದೆ ಊರು ಬಿಟ್ಟು ಬೆಂಗಳೂರು ಸೇರಿದ್ದ. ಪಾಪ ಅವನ ಮಗ ಅಕ್ಕ ಪಕ್ಕದ ಊರು ಕೇರಿಯೆಲ್ಲಾ ಹುಡುಕಿದ್ದ. ಪೋಲಿಸರಿಗೂ ತಿಳಿಸಿದ್ದ. ಆದರೆ ಕೂದಲು ಗಡ್ಡ ಬೆಳೆಸಿಕೊಂಡು ಹರಕಲು ಬಟ್ಟೆ ಹಾಕಿಕೊಂಡು ಹುಚ್ಚನಂತೆ ಅಲೆಯುವ ಸಿದ್ದಪ್ಪನನ್ನು ಯಾರು ಗುರುತಿಸಲಿಲ್ಲ.

ಈಗ ಅವನ ಹಾಸಿಗೆಯನ್ನು ನೆನೆಯುತ್ತ ಕುಳಿತಿದ್ದ. ಯಾವಾಗಲೋ ಜೊಂಪು ಹತ್ತಿ ನಿದ್ದೆಗೆ ಜಾರಿದ. ಬೆಳಿಗ್ಗೆ ಎಚ್ಚರವಾದಾಗ ಮೊದಲು ನೆನಪಾಗಿದ್ದು ಹಾಸಿಗೆ ಅದು ಇನ್ನೂ ಅಲ್ಲೆ ಇತ್ತು. ಕೆಲಸಕ್ಕೆ ಹೊರಟಾಗ ಬೀದಿ ಕಸ ಎತ್ತುವವರು ಅದನ್ನು ತೆಗೆದುಕೊಂಡು ಹೋಗಬಹುದು ಎಂಬ ಸಂದೇಹ. ಚೀಲದಲ್ಲಿ ತಡಕಾಡಿ ಒಂದು ಹುರಿಯನ್ನು ತೆಗೆದು ಹಾಸಿಗೆಯ ಮೂಲೆಯನ್ನು ಅಂಗಡಿಗೆ ಹಾಕಿದ ಬೀಗದ ಕೊಂಡಿಗೆ ಕಟ್ಟಿ ಹೊರಟ.

ಅಂದು ಕೆಲಸದ ಮಧ್ಯದಲ್ಲಿ ಹಾಸಿಗೆಯದೇ ಚಿಂತೆ. ಸಂಜೆ ಉಸ್ಸೆಂದು ಬಂದಾಗ ಹಾಸಿಗೆ ಅಲ್ಲೇ ಇದೆ ಎನ್ನುವುದೇ ಮನಸ್ಸಿಗೆ ನೆಮ್ಮದಿ ನೀಡಿತ್ತು. ಹಾಸಿಗೆಯ ಮೇಲೆ ಮಲಗಿ ವರ್ಷಗಳೇ ಉರುಳಿತ್ತು. ಆ ಮೆತ್ತನೆಯ ಹಾಸಿಗೆಯ ಮೇಲೆ ಮಲಗಿ ನಿದ್ದೆಗೆ ಜಾರುವುದೆ ಒಂದು ಸೊಗಸು. ಕಣ್ಣ ಮುಂದಿನ ಹಾಸಿಗೆ ಕರೆಯುತ್ತಿತ್ತು. ಮಲಗಲೆ ಅದರ ಮೇಲೆ? ಸಿದ್ದಪ್ಪ ಯೋಚಿಸಿದ. ಹಾಸಿಗೆಯನ್ನು ಮುಟ್ಟಿ ತಟ್ಟಿ ನೋಡಿದ. ಮೆತ್ತಗಿತ್ತು. ತನ್ನ ಮೂಟೆಯನ್ನು ಅದರ ಮೇಲೆ ಇಟ್ಟು ಅದನ್ನು ದಿಂಬಾಗಿಸಿ ಮೈ ಚೆಲ್ಲಿದ. ದಿನವಿಡೀ ಬಿಸಿಲಿನಲ್ಲಿ ದೇಹ ದಣಿದಿತ್ತು. ಮೆತ್ತನೆಯ ಹಾಸಿಗೆಯ ಅಪ್ಪುಗೆಯಲ್ಲಿ ನಿದ್ದೆ ಬಂದೇ ಬಿಟ್ಟಿತು ಸಿದ್ದಪ್ಪನಿಗೆ.

## ಆಶಯ

ಇಂದಿರಾ ಕ್ಯಾಂಟೀನು
ನಮ್ಮ ಗ್ರಾಮಗಳಿಗೂ
ಬರಲೆಂದು
ಆಶಿಸುವೆವು
ಬರದಿಂದ ಗುಳೆ
ಹೊರಟಿರುವ ನಾವು

★ ಫಾಲನೇತ್ರ, ಗಂಗಪ್ಪ ಸಜ್ಜನ




# ನಾಳೆಗಳು

■ ಗೋಪಾಲಗೌಡ ಕಲ್ವಮಂಜಲಿ

'ಈ ಊರಿನ ಹೆಸರು ಮಾತ್ರ ಬೆಟ್ಟಹಳ್ಳಿ. ಆದ್ರೆ ಎಲ್ಲಿಯೂ ಬೆಟ್ಟದ ದರ್ಶನವೇ ಆಗ್ತಿಲ್ಲವೇ!' ಇನ್ನೇನು ತಮ್ಮ ಗಮ್ಯಸ್ಥಾನ ಸಮೀಪಿಸಿತು ಎಂದುಕೊಂಡ ರಾಜೀವ ಸಹಜವಾಗಿಯೇ ಕುತೂಹಲವನ್ನು ತೋಡಿಕೊಂಡಿದ್ದ. ಗೆಳೆಯನ ಮಾತಿಗೆ ಮಾತು ಪೋಣಿಸುವ ಬದಲು ರಾಮನಾಥ ಮೋಟರ್‌ಬೈಕನ್ನ ರಸ್ತೆ ಬದಿಯಲ್ಲಿ ನಿಲ್ಲಿಸಿದಾಗ ಇಬ್ಬರು ಕೆಳಗಿಳಿದರು. ರಾಜೀವನಿಗೂ ಅದೇ ಬೇಕಾಗಿದ್ದಿತು. ಹಾಗಲಕಾಯಿ ಸಿಪ್ಪೆಯಂತೆ ಅಂಕುಡೊಂಕಿನಿಂದ ಕೂಡಿದ್ದ ಆ ರಸ್ತೆಯಲ್ಲಿ ದೇವನಹಳ್ಳಿಯಿಂದ ಹೊರಟವರಿಗೆ 10ಕಿ.ಮೀ ಕ್ರಮಿಸುವಷ್ಟರಲ್ಲೇ ಸಾಕು ಸಾಕಾಗಿದ್ದಿತು.

'ಇಂಥ ದರಿದ್ರ ರಸ್ತೆಯ ಅನುಭವ ನನಗಿದೇ ಪ್ರಥಮ. ಈ ದಾರಿಯಲ್ಲಿ ದಿನನಿತ್ಯ ಓಡಾಡೋ ಪುಣ್ಯಾತ್ಮರನ್ನ ಆ ದೇವರೇ ಕಾಪಾಡಬೇಕು' ಕಟಿಹಸ್ತನಾಗಿ ಅತ್ತಿತ್ತ ಸೊಂಟವನ್ನು ಆಡಿಸುತ್ತಾ ರಾಜೀವ ಹುಳ್ಳನೇ ಮುಖ ಮಾಡಿಕೊಂಡಿದ್ದ.

'ಈ ಮಾರ್ಗದಲ್ಲಿ ದಿನವೂ ಓಡಾಡೋ ಆ ಪುಣ್ಯಾತ್ಮರಿಂದಾಗಿಯೇ ಈ ರಸ್ತೆಗೆ ಇಂಥ ಹೀನ ಸ್ಥಿತಿ ಉಂಟಾಗಿರೋದು. ನೂರಾರು ಲಾರಿ ಮತ್ತು ಟಿಪ್ಪರ್‌ಗಳು ಗ್ರಾನೈಟ್ ದಿಮ್ಮಿಗಳನ್ನು ತುಂಬಿಸಿಕೊಂಡು ದಿನ ಪೂರ್ತಿ ಯಮಭಾರದಲ್ಲಿ ಅಡ್ಡಾಡ್ತಿದ್ದರೆ ಎಲ್ಲ ರಸ್ತೆಗಳ ಗತಿಯೂ ಹೀಗೇನೆ ಆಗೋದು' ರಾಮನಾಥನ ದನಿಯಲ್ಲಿ ಅಸಮಾಧಾನ ಹೊಗೆಯಾಡುತ್ತಿದ್ದಿತು.

'ಓಹ್ ಅದಾ ವಿಷ್ಯ! ಹಾಗಾದರೆ ಈ ಊರಿನ ಬೆಟ್ಟ ಈ ಲಾರಿ ಟಿಪ್ಪರ್‌ಗಳ ಮೂಲಕವೇ ಪರ ಊರಿಗೆ ಪ್ರಯಾಣ ಬೆಳೆಸಿರಬೇಕು. ಮತ್ತೆ ಕಣ್ಣಿಗೆ ಬೀಳು ಅಂದ್ರೆ ಹೇಗೆ ತಾನೇ ಸಾಧ್ಯ'ರಾಜೀವ ಅಚ್ಚರಿ ಸೂಚಿಸಿದ್ದ.

'ರಾಜೀವ ಹಲವಾರು ವರ್ಷಗಳಿಂದಲೂ ಕಲ್ಲುಗಣಿಗಾರಿಕೆ ಇಲ್ಲಿ ಸದ್ದು ಮಾಡಿಕೊಂಡೇ ನಡೆಯುತ್ತಿದೆ. ಆ ಗಣಿ ಭೂಪರ ಬಳಿ ಸರ್ಕಾರಿ ಪರವಾನಗಿ ಇಲ್ಲದಿಲ್ಲ. ಈ ದಂಧೆಯ ಒಳಗು ಹೀಗಿರೋವಾಗ ನಮ್ಮಂಥ ಬಡ ಮೇಷ್ಟ್ರುರು ತಲೆ ಕೆಡಿಸಿಕೊಳ್ಳೋದರಿಂದ ಏನ್ಲಾನೆ ಪ್ರಯೋಜನ? ನಾವಿಲ್ಲಿಗೆ ಬಂದಿರೋ ಉದ್ದೇಶವೇ ಬೇರೆ ಇದೆ. ಈ ಊರಾಚೆ ಇರೋ ಸೋಮೇಶ್ವರನ ಗುಡಿಯನ್ನು ತಲುಪಿ ಅದರ ಟಿಪ್ಪಣಿ ಮಾಡಿಕೊಂಡು ಆದಷ್ಟು ಬೇಗ ಇಲ್ಲಿಂದ ಜಾಗ ಖಾಲಿ ಮಾಡಬೇಕಷ್ಟೆ'.

'ಆದರೆ ರಾಮನಾಥ ಈ ಭಾಗದ ಜನ ಈ ಗ್ರಾನೈಟ್ ಗಣಿಗಾರಿಕೆ ಯಿಂದ ಉಂಟಾಗ್ತಿರೋ ಪ್ರತಿಕೂಲಗಳನ್ನೆಲ್ಲ ಬದಿಗಿಟ್ಟು, ಕೇವಲ ಹಣದ ಹಿಂದೆ ಬಿದ್ದಿರೋದು ಮಾತ್ರ ನನಗೆ ತೀರಾ ವಿಚಿತ್ರ ಅನ್ನಿಸ್ತಿದೆ. ಈ ಮತಿಗೆಟ್ಟ ಮನುಷ್ಯರಿಗೆ ನಾಳೆಗಳಿಗಿಂತ ಇವತ್ತಿನ ಕ್ಷಣಿಕ ಸುಖಭೋಗವೇ ಬಹಳ ರುಚಿಯಾಗಿ ಅಡರಿಕೊಂಡಿರಬೇಕು'

'ನಿಜ, ನಿನ್ನ ಮಾತನ್ನ ನಾನು ಕೂಡ ಒಪ್ಪುತ್ತೀನಿ. ಆದರೆ ರಾಜೀವ, ಸುಖದ ಲೋಲುಪತೆಯಲ್ಲಿ ಮುಳುಗಿದವರಿಗೆ ನಾಳೆಯ ನೆನಪು ತಲೆ ಹೋಗುವ ಸಂದರ್ಭ ತೀರಾ ಕಡಿಮೆ! ಯಾರದೋ ಶ್ರಮವನ್ನು ನಗದು ಮಾಡಿಕೊಂಡು ಮಜಾ ಮಾಡುವ ಅತಿಜಾಣರು ನಮ್ಮ ನಡುವೆ ಸೇರಿಕೊಂಡಾಗ, ಇಂತಹದ್ದೆಲ್ಲ ನಿರಂತರವಾಗಿ ಮತ್ತು ನಿರಾತಂಕವಾಗಿ ನಡೆಯುತ್ತಲೇ ಇರ್ತದೆ. ಈ ಕೆಟ್ಟ ನಡೆಗೆ ತಡೆ ಒಡ್ಡುವ ಎದೆಗಾರಿಕೆ ಮತ್ತು ಇಚ್ಛಾಶಕ್ತಿ ಯಾರಿಗಿದೆ? ಯಾರಿಗೆ ಇರಬೇಕಾಗಿತ್ತು? ನೀನೆ ಅರ್ಥಮಾಡಿಕೊ'.

'ಹೋಗಲಿ ಬಿಡು ರಾಮನಾಥ, ಈ ಚರ್ಚೆಯನ್ನು ಇಲ್ಲಿಗೇ ನಿಲ್ಲಿಸಿ ಬಿಡೋಣ. ಈ ಉಪನ್ಯಾಸಕರ ಚಿಂತೆ ಚಿಂತನೆಗಳೆಲ್ಲ ಕಾಲೇಜ್ ಕ್ಲಾಸ್ ರೂಮ್‌ಗಳಲ್ಲಿ ಶಿಷ್ಯರಿಗೆ ಬೋರು ಹೊಡಿಸಲಿಕ್ಕಷ್ಟೆ ಲಾಯಕ್ಕು. ಕೊನೆಗೆ ಮುಂದಿನ ದಿನಗಳಲ್ಲಾದರೂ ಈ ಪ್ರಕೃತಿ ಭಂಜಕರ ಓಟವನ್ನ ಹಳಿ ತಪ್ಪಿಸುವ ಧೈರ್ಯ ಮತ್ತು ಹೊಣೆಗಾರಿಕೆ ಯುವಪೀಳಿಗೆಯಲ್ಲಿ ಮೂಡಲಿ. ಆ ದಿಶೆಯಲ್ಲಾದರೂ ನಾವು ಶಿಷ್ಯಕೋಟಿಯ ಮೆದುಳನ್ನು